2) ಸಾರ್ವಜನಿಕ ಶಿಕ್ಷಣ ಇಲಾಖೆಯ ಆನಧಿಕೃತ ಶಾಲಾ-ಕಾಲೇಜುಗಳಲ್ಲಿ ತಮ್ಮ ಮಕ್ಕಳನ್ನು ಸೇರಿಸಬಾರದೆಂದು ಪೋಷಕರಿಗೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಎಲ್ಲಾ ಪ್ರಮುಖ ದಿನ ಪತ್ರಿಕೆಗಳ ಮೂಲಕ ಪ್ರಕಟಣೆ ನೀಡುತ್ತಿದೆ. ಆನಧಿಕೃತ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳ ಸಮಸ್ಯೆ ಬಗ್ಗೆ ಪರಿಶೀಲಿಸಲು ತಜ್ಞರ ಸಮಿತಿಯನ್ನು ರಚಿಸಿದ್ದು ಸಮಿತಿಯು ದಿನಾಂಕ 17-6-1991ರಂದು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ವರದಿಯು ಸರ್ಕಾರದ ಪರೀಶೀಲನೆಯಲ್ಲಿದೆ.

ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಶಿಕ್ಷಕರನ್ನು ನೇಮಿಸುವುದು

478 (789). ಡಾ: ಆರ್.ಬಿ. ಚೌಧರಿ (ಸಿಂಧಗಿ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸರ್ಕಾರಿ ಉರ್ದು ಪ್ರಾರ್ಥಮಿಕ ಶಾಲೆಗಳಲ್ಲಿ ಕನ್ನಡ ಶಿಕ್ಷಕರನ್ನು ನೇಮಿಸುವ ಅವಕಾಶಗಳಿದ್ದು, ಈ ಸೌಲಭ್ಯ ಖಾಸಗಿ ಶಾಲೆಗಳಿಗೆ ವಿಸ್ತರಿಸಿಲ್ಲದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಏಕೆ?

ಶ್ರೀ ಎಂ. ವೀರಪ್ಪ ಮೊಯಲಿ (ಶಿಕ್ಷಣ ಸಚಿವರು):-

ಅ) ಹೌದು.

ಆ) ಪ್ರಾಥಮಿಕ ಶಾಲೆಗಳಲ್ಲಿ ಭಾಷಾ ಶಿಕ್ಷಕರ ಪ್ರತ್ಯೇಕ ನೇಮಕಾತಿಗೆ ಅವಕಾಶವಿಲ್ಲ. ಶಾಲೆಗೆ ಮಂಜೂರಾದ ಶಿಕ್ಷಕರ ಹುದ್ದೆಯಲ್ಲಿ ಒಂದು ಹುದ್ದೆಯನ್ನು ಕನ್ನಡ ಭಾಷಾ ಜ್ಞಾನ ಬಲ್ಲವರಿಂದ ತುಂಬುವಂತೆ ಆದೇಶಿಸಲಾಗಿದೆ.

ಕುಂದಾಪುರ ಕ್ಷೇತ್ರದ ವ್ಯಾಪ್ತಿಯ ಪ್ರೌಢಶಾಲೆಗಳ ಕುರಿತು

479 (794). ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕುಂದಾಪುರ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪ್ರೌಢಶಾಲೆಗಳೆಷ್ಟು? (ಶಾಲಾವಾರು ವಿವರ ನೀಡುವುದು)

ಆ) ಈ ಪ್ರೌಢಶಾಲೆಗಳಿಗೆ ಮಂಜೂರಾದ ಅಧ್ಯಾಪಕರೆಷ್ಟು? (ಶಾಲಾವಾರು ವಿವರ ನೀಡುವುದು)

ಇ) ವಿದ್ಯಾರ್ಥಿಗಳ ನಿಷ್ಪತ್ತಿಗನುಸಾರವಾಗಿ ಕೊರತೆ ಇರುವ ಅಧ್ಯಾಪಕರೆಷ್ಟು?

ಈ) ಕೊರತೆಯನ್ನು ಪೂರೈಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಲಿ (ಶಿಕ್ಷಣ ಸಚಿವರು):-

ಅ) 23. (ಅನುಬಂಧ ಆನಲ್ಲಿ ಕೊಡಲಾಗಿದೆ)

ಆ) 217. (ಅನುಬಂಧ ಬಿ ನಲ್ಲಿ ಕೊಡಲಾಗಿದೆ)

ಇ) 26.

ಈ) ಆರ್ಥಿಕ ಮಿತವ್ಯಯ ಆದೇಶವನ್ನು ಸಡಿಸಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.

ಸರ್ಕಾರಿ ಸಂಯುಕ್ತ ಕಿರಿಯ ಕಾಲೇಜಿನ ಪ್ರೌಢಶಾಲಾ ವಿಭಾಗ

ಅನುಬಂಧ - ಅ

1) ಸರ್ಕಾರಿ ಕಿರಿಯ ಕಾಲೇಜು, ಕುಂದಾಪುರ
2) ಸರ್ಕಾರಿ ಕಿರಿಯ ಕಾಲೇಜು, ಬೈಂದೂರು
3) ಸರ್ಕಾರಿ ಕಿರಿಯ ಕಾಲೇಜು, ಶಂಕರನಾರಾಯಣ
4) ಸರ್ಕಾರಿ ಕಿರಿಯ ಕಾಲೇಜು, ನಾವುಂದ

5) ಸರ್ಕಾರಿ ಕಿರಿಯ ಕಾಲೇಜು, ಕೋಟೇಶ್ವರ
6) ಸರ್ಕಾರಿ ಕಿರಿಯ ಕಾಲೇಜು, ಉಪ್ಪುಂದ
7) ಸರ್ಕಾರಿ ಕಿರಿಯ ಕಾಲೇಜು, ತೆಕ್ಕೆಟ್ಟೆ
8) ಸರ್ಕಾರಿ ಕಿರಿಯ ಕಾಲೇಜು, ವಂಡ್ಸೆ
9) ಸರ್ಕಾರಿ ಪ್ರೌಢಶಾಲೆ, ಕೇದೂರು
10) ಸರ್ಕಾರಿ ಪ್ರೌಢಶಾಲೆ, ಶಿರೂರು
11) ಸರ್ಕಾರಿ ಪ್ರೌಢಶಾಲೆ, ಹಕ್ಲಾಡಿ
12) ಸರ್ಕಾರಿ ಪ್ರೌಢಶಾಲೆ, ಅಲ್ಯಾಡಿ
13) ಸರ್ಕಾರಿ ಪ್ರೌಢಶಾಲೆ, ಬೆದಕಲಕಟ್ಟೆ
14) ಸರ್ಕಾರಿ ಪ್ರೌಢಶಾಲೆ, ಸಿದ್ದಾಪುರ
15) ಸರ್ಕಾರಿ ಪ್ರೌಢಶಾಲೆ, ಕಂಬದಕೋಣೆ
16) ಸರ್ಕಾರಿ ಪ್ರೌಢಶಾಲೆ, ಬಸರೂರು
17) ಸರ್ಕಾರಿ ಪ್ರೌಢಶಾಲೆ, ಅಮಾಸೆಬೈಲ್
18) ಸರ್ಕಾರಿ ಪ್ರೌಢಶಾಲೆ, ಕಿರಿಮಂಜೇಶ್ವರ
19) ಸರ್ಕಾರಿ ಪ್ರೌಢಶಾಲೆ, ತೆಳ್ಳೂರು
20) ಸರ್ಕಾರಿ ಪ್ರೌಢಶಾಲೆ, ಹೊಸಂಗಡಿ, ಉಡುಪಿ ತಾಲ್ಲೂಕು
21) ಸರ್ಕಾರಿ ಪ್ರೌಢಶಾಲೆ, ಒದೇರ ಹೋಬಳಿ, ಉಡುಪಿ ತಾಲ್ಲೂಕು
22) ಸರ್ಕಾರಿ ಕಿರಿಯ ಕಾಲೇಜು ಗೋಳಿಯಂಗಡಿ, ಉಡುಪಿ ತಾಲ್ಲೂಕು
23) ಸರ್ಕಾರಿ ಪ್ರೌಢಶಾಲೆ, ಅಪರ್ಸೆ, ಉಡುಪಿ ತಾಲ್ಲೂಕು

ಅನುಬಂಧ - ಬಿ

ಸರ್ಕಾರಿ ಸಂಯುಕ್ತ ಕಿರಿಯ ಕಾಲೇಜಿನ ಪ್ರೌಢಶಾಲೆ ವಿಭಾಗ

1. ಕುಂದಾಪುರ	22 ಹುದ್ದೆಗಳು
2. ಬೈಂದೂರು	14 ಹುದ್ದೆಗಳು
3. ಶಂಕರನಾರಾಯಣ	09 ಹುದ್ದೆಗಳು
4. ನಾವುಂದ	10 ಹುದ್ದೆಗಳು
5. ಕೋಟೇಶ್ವರ	15 ಹುದ್ದೆಗಳು
6. ಉಪ್ಪುಂದ	11 ಹುದ್ದೆಗಳು
7. ತೆಕ್ಕೆಟ್ಟೆ	08 ಹುದ್ದೆಗಳು
8. ವಂಡ್ಸೆ	08 ಹುದ್ದೆಗಳು

ಸರ್ಕಾರಿ ಪ್ರೌಢಶಾಲೆಗಳು

9. ಕೇದೂರು	10 ಹುದ್ದೆಗಳು
10. ಶಿರೂರು	11 ಹುದ್ದೆಗಳು
11. ಹಕ್ಲಾಡಿ	08 ಹುದ್ದೆಗಳು
12. ಅಲ್ವಾಡಿ	07 ಹುದ್ದೆಗಳು
13. ಬೆದಕಲ್ ಕಟ್ಟೆ	08 ಹುದ್ದೆಗಳು
14. ಸಿದ್ದಾಪುರ	08 ಹುದ್ದೆಗಳು
15. ಕಂಟದಕೋಣೆ	10 ಹುದ್ದೆಗಳು
16. ಬಸ್ರೂರು	10 ಹುದ್ದೆಗಳು
17. ಅಮಾಸೆಬೈಲ್	10 ಹುದ್ದೆಗಳು
18. ಕಿರಿಮಂಜೇಶ್ವರ	10 ಹುದ್ದೆಗಳು

19. ತಳ್ಳೂರು -
20. ಹೊಸಂಗಡಿ -
21. ಒದ್ಯೆರ ಹೋಬಳಿ 08 ಹುದ್ದೆಗಳು
22. ಆವರ್ಸೆ 10 ಹುದ್ದೆಗಳು

ಹೊಸದಾಗಿ ಪ್ರಾರಂಭವಾದ ಕ್ರಮ ಸಂಖ್ಯೆ: 20 , 21ರ ಶಾಲೆಗೆ ಶಿಕ್ಷಕರರ ಹುದ್ದೆಗಳು ಇನ್ನೂ ಮಂಜೂರಾಗಿಲ್ಲ. ಇಷ್ಟರಲ್ಲಿಯೇ ಮಂಜೂರಾಗುತ್ತದೆ.

ಕುಂದಾಪುರ ಕ್ಷೇತ್ರದಲ್ಲಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ

480 (795). ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕುಂದಾಪುರ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪದವಿಪೂರ್ವ ಕಾಲೇಜುಗಳೆಷ್ಟು? (ಕಾಲೇಜುವಾರು ವಿವರ ನೀಡುವುದು)

ಆ) ಈ ಕಾಲೇಜುಗಳಿಗೆ ಮಂಜೂರಾದ ಉಪನ್ಯಾಸಕರೆಷ್ಟು? (ಕಾಲೇಜುವಾರು ವಿವರ ನೀಡುವುದು)

ಇ) ವಿದ್ಯಾರ್ಥಿಗಳ ನಿಷ್ಪತಿಗನುಸಾರವಾಗಿ ಕೊರತೆ ಇರುವ ಉಪನ್ಯಾಸಕರೆಷ್ಟು? (ಕಾಲೇಜುವಾರು ವಿವರ ನೀಡುವುದು)

ಈ) ಕೊರತೆಯನ್ನು ನಿವಾರಿಸಲು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಎಂ. ವೀರಪ್ಪ ಮೊಯಲಿ (ಶಿಕ್ಷಣ ಸಚಿವರು):-

ಅ) ಕುಂದಾಪುರ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪದವಿ ಪೂರ್ವ ಕಾಲೇಜುಗಳು -5.

ಕಾಲೇಜುವಾರು ವಿವರ

1. ಕುಂದಾಪುರ
2. ಕೋಟೇಶ್ವರ
3. ಶಂಕರನಾರಾಯಣ
4. ಗೋಳಿಯಂಗಡಿ
5. ತಕ್ಕಟ್ಟೆ

ಆ) ಈ ಕಾಲೇಜುಗಳಿಗೆ ಮಂಜೂರಾದ ಉಪನ್ಯಾಸಕರ ವಿವರ.

1. ಕುಂದಾಪುರ - 9
2. ಕೋಟೇಶ್ವರ - 11
3. ಶಂಕರನಾರಾಯಣ - 10
4. ಗೋಳಿಯಂಗಡಿ - 7
5. ತೆಕ್ಕಟ್ಟೆ - 7

ಇ) ಕುಂದಾಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಕೊರತೆ ಇರುವ ಉಪನ್ಯಾಸಕರ ವಿವರ.

1. ಕುಂಬಾಪುರ - 1
2. ಕೋಟೇಶ್ವರ - 2
3. ಶಂಕರನಾರಾಯಣ - 1
4. ಗೋಳಿಯಂಗಡಿ - 1
5. ತೆಕ್ಕೆಟ್ಟೆ - 1